1028 (1617)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೂತನ ಜಿಲ್ಲೆಯಾದ ಹಾವೇರಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಮಸ್ಯೆ ನಿವಾರಿಸಲು ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ?

ಇ) ಯೋಜನೆಯ ಪೂರ್ತಿ ವಿವರ ನೀಡುವುದು.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಬಂದಿದೆ.

ಆ) ಹಾವೇರಿ ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಒಂದು ಸಮಗ್ರ ನೀರು ಸರಬರಾಜು ಯೋಜನೆಯನ್ನು ವರದಾ ನದಿಯನ್ನು ಮೂಲವಾಗಿಟ್ಟುಕೊಂಡು ರೂ. 1095.18 ಲಕ್ಷಗಳಿಗೆ ತಯಾರಿಸಲಾಗಿದ್ದು ಈ ಯೋಜನೆಗೆ ಸರ್ಕಾರವು ತನ್ನ ಆದೇಶ ಸಂಖ್ಯೆ. ಯುಡಿ:21:ಯುಡಬ್ಲ್ಯುಎಸ್:97 ದಿನಾಂಕ 26.8.97ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಇ) ಮೇಲ್ಕಂಡ ಯೋಜನೆಯಲ್ಲಿ 2011ರಲ್ಲಿ ಇರಬಹುದಾದಂತಹ ಜನಸಂಖ್ಯೆಗೆ ಮಧ್ಯಂತರ ಬೇಡಿಕೆಯಾದ 7.76 ದಶಲಕ್ಷ ನೀರು ಹಾಗೂ 2021ರಲ್ಲಿ ಇರಬಹುದಾದಂತಹ ಜನಸಂಖ್ಯೆಗೆ 10 ದಶಲಕ್ಷ ನೀರನ್ನು ಒದಗಿಸಲು ವಿನ್ಯಾಸ ಮಾಡಲಾಗಿದೆ. ಈ ಯೋಜನೆಯು ಚಾಲ್ತಿಗೊಂಡ ನಂತರ ಹಾವೇರಿ ನಗರದ ಜನಸಂಖ್ಯೆ ಪ್ರತಿದಿನ ಪ್ರತಿಯೊಬ್ಬರಿಗೆ ತಲಾ 115 ಲೀಟರ್ ನೀರನ್ನು ಒದಗಿಸಬಹುದಾಗಿದೆ. ಈ ಯೋಜನೆ ಶೇ.50ರಷ್ಟು ಅಂದಾಜು ವೆಚ್ಚವನ್ನು ಸರ್ಕಾರವು ಅನುದಾನವಾಗಿ ನೀಡಿದ್ದು ಇನ್ನುಳಿದ ಶೇ.50ರಷ್ಟು ಹಣವನ್ನು ಹುಡ್ಕೋ ಆರ್ಥಿಕ ಸಂಸ್ಥೆಯಿಂದ ಸಾಲವಾಗಿ ಪಡೆಯಲಾಗುವುದು.

ಈ ಯೋಜನೆಯ ಎಲ್ಲಾ ಕಾಮಗಾರಿಗಳಿಗೆ ಪ್ಯಾಕೇಜ್ ಟೆಂಡರ್ ಕರೆಯಲು ಕ್ರಮ ತೆಗೆದುಕೊಳ್ಳಲಾಗಿದೆ.

ವಿಷಯ: ಅಂಬೇಡ್ಕರ್‌ರ ಯೋಜನೆ ಬಗ್ಗೆ.

1029 (1539)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಬೇಡ್ಕರ್ ಯೋಜನೆ ಪ್ರಾರಂಭವಾದ ವರ್ಷ ಯಾವುದು?

ಆ) ಸದರಿ ವರ್ಷದಿಂದ 1997-98ನೇ ಸಾಲಿನವರೆಗೆ ವರ್ಷವಾರು ನಿಗದಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿ ಪ್ರಗತಿ ಎಷ್ಟು?

ಇ) 1998-99ನೇ ಸಾಲಿನಲ್ಲಿ ಹಾಕಿಕೊಂಡ ಜಿಲ್ಲಾವಾರು ಗುರಿ ಎಷ್ಟು?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಅಂಬೇಡ್ಕರ್ ವಸತಿ ಯೋಜನೆ ಎಂಬ ಕಾರ್ಯಕ್ರಮವು 1993-94ನೇ ಸಾಲಿನಿಂದ ಪ್ರಾರಂಭವಾಗಿರುತ್ತದೆ.

ಆ) 1993-94ನೇ ಸಾಲಿನಿಂದ 1997-98ನೇ ಸಾಲಿನವರೆಗೆ ವಸತಿ ಯೋಜನೆಯಡಿ ವರ್ಷವಾರು ನಿಗದಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿ ಹಾಗೂ ಸಾಧಿಸಿದ ಪ್ರಗತಿಯ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ವರ್ಷ	ಭೌತಿಕ ಗುರಿ	ಆರ್ಥಿಕ ಗುರಿ	ಭೌತಿಕ ಪ್ರಗತಿ	ಆರ್ಥಿಕ ಪ್ರಗತಿ
			ಫೆಬ್ರವರಿ 98ಕ್ಕೆ ರೂ. ಲಕ್ಷಗಳಲ್ಲಿ		
1.	1993-94 (ನ) ಮತ್ತು (ಗ್ರಾ)	32184	4920.10	27594	4232.07
2.	1994-95 (ಗ್ರಾ)	13535	2030.25	10463	1535.40
3.	1995-96 (ಗ್ರಾ)	25000	4750.00	22860	4550.40
4.	1996-97 (ಗ್ರಾ)	35000	6750.00	16001	365523

5.	1997-98 (ನ) ಮತ್ತು (ಗ್ರಾ)	35000	6750	-	-

1997-98ನೇ ಸಾಲಿನಲ್ಲಿ ಕ್ರೋಢೀಕೃತ ಮಾಡಿದ ಅನುದಾನವು ವರ್ಷದ ಅಂತ್ಯದಲ್ಲಿ ಬಿಡುಗಡೆಯಾಗಿರುವುದರಿಂದಲೂ ಮತ್ತು ಜಿಲ್ಲೆಗಳ ಪುನರ್ವಿಂಗಡಣೆಯಿಂದಾಗಿ ತಾಲ್ಲೂಕುವಾರು ಗುರಿಗಳನ್ನು ನಿಗದಿಪಡಿಸಿರುವುದರಲ್ಲಿ ವಿಳಂಬವಾಗಿದ್ದರಿಂದಲೂ ಫಲಾನುಭವಿಗಳ ಆಯ್ಕೆಯನ್ನು ಮಾಡುವ ಸಮಿತಿಯು ಚುನಾವಣೆಗಳ ಕಾರಣ ಫಲಾನುಭವಿಗಳ ಆಯ್ಕೆಯನ್ನು ಪೂರ್ಣಗೊಳಿಸಿದ ಕಾರಣ ಪ್ರಗತಿ ಇರುವುದಿಲ್ಲ.

ಇ) 1998-99ನೇ ಸಾಲಿನಲ್ಲಿ ಅಂಬೇಡ್ಕರ್ ವಸತಿ ಯೋಜನೆಯಡಿ ರಾಜ್ಯದಲ್ಲಿ 20000 ಮನೆಗಳನ್ನು ನಿರ್ಮಿಸಲು ಗುರಿ ನಿಗದಿಪಡಿಸಲಾಗುವುದು.

ವಿಷಯ: ಹಾವೇರಿ ಜಿಲ್ಲೆಯಲ್ಲಿ ಕೇಂದ್ರಸ್ಥಾನದಲ್ಲಿ ವಾಸಿಸದೆ ಇರುವ ಅಧಿಕಾರಿಗಳು.

1031 (1538)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ವಾಸಿಸಬೇಕಾದ ವಿವಿಧ ಇಲಾಖೆಯ ಅಧಿಕಾರಿಗಳ ಹುದ್ದೆ ಹಾಗೂ ಅವರ ಹೆಸರುಗಳೇನು?

ಆ) ಈ ರೀತಿ ಕೇಂದ್ರ ಸ್ಥಾನದಲ್ಲಿ ವಾಸಿಸದೇ ಇರುವ ಅಧಿಕಾರಿಗಳು ಯಾರು? ಎಲ್ಲಿಂದ ಕೇಂದ್ರ ಸ್ಥಾನಕ್ಕೆ ಓಡಾಡುತ್ತಿದ್ದಾರೆ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 1. ಶ್ರೀ ಸಿ.ಕೃಷ್ಣಪ್ಪ, ಜಿಲ್ಲಾಧಿಕಾರಿ, ಹಾವೇರಿ ಜಿಲ್ಲೆ.

2. ಶ್ರೀ ಕೆ.ವಿ.ಗಗನದೀಪ್, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು

3. ಶ್ರೀ ಸಿ.ಎಂ.ಹಿರೇಮಠ, ಪ್ರಭಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು.

4. ಶ್ರೀ ಎಲ್.ಎಲ್.ನಾಯಕ್, ಜಿಲ್ಲಾ ನೋಂದಣಾಧಿಕಾರಿಗಳು.

5. ಶ್ರೀ ಎಸ್.ಬಿ.ಶಿವಪೂರ, ಪ್ರಭಾರ ಉಪ ನಿಬಂಧಕರು, ಸಹಕಾರ ಸಂಘಗಳು.